ಮಧ್ವರಾಯ ಗುರು ಮಧ್ವರಾಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 433.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 45.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 88.
4. **Note:** Lyrics given without highlights are as per Ref. 1. Lyrics in Ref. 2 and Ref. 3 are almost similar except few differences, which are given in yellow highlights. Few other minor differences are not considered here.
5. **Note:** Singer has followed lyrics as in Ref. 1.

ರಾಗ: ಸಾವೇರಿ (ಶಂಕರಾಭರಣ) ತಾಳ: ಅಟ (ಏಕ)

ಮಧ್ವರಾಯ ಗುರು ಮಧ್ವರಾಯ
ಗುರು ಮಧ್ವರಾಯ ಗುರು ಮಧ್ವರಾಯ || ಪ ||

ರಾಮಾವತಾರದೊಳೊಮ್ಮೆ ಮಧ್ವರಾಯ
ನೀ ಮಹಾ ಹನುಮನಾದ್ಯೋ ಮಧ್ವರಾಯ
ಕಾಮಿತಾರ್ಥ ಸುರರಿಗಿತ್ತ್ಯೋ ಮಧ್ವರಾಯ, ಅಯ್ಯ
(ವಾಮಮುಷ್ಟಿಲಿ) (ಮುಷ್ಟಿಯಿಂದ) ರಾವಣನ ಗೆದ್ಯೋ ಮಧ್ವರಾಯ || 1 ||

ಕೃಷ್ಣಾವತಾರದೊಳೊಮ್ಮೆ ಮಧ್ವರಾಯ
(ದುಷ್ಟ ಕುಲಕೆ) (ನೀ ದಿಟ್ಟ ಕಲಿ) ಭೀಮನಾದ್ಯೋ ಮಧ್ವರಾಯ
ಕುಟ್ಟಿದ್ಯೋ ಕೌರವರನ್ನೆಲ್ಲ ಮಧ್ವರಾಯ, ಅಯ್ಯ ಶ್ರೀ-
ಕೃಷ್ಣನ (ಹಿತವ) (ಪ್ರೀತಿಯ) ಪಡೆದ್ಯೋ ಮಧ್ವರಾಯ || 2 ||

ಧರಣಿಯೊಳು (ನರನಾಗಿ) (ಯತಿಯಾಗಿ) ಜನಿಸಿದ್ಯೋ ಮಧ್ವರಾಯ
ದುರುಳ (ಮಾಯಮತವ) (ಮಾಯಿಮತವ) ತರಿದ್ಯೋ ಮಧ್ವರಾಯ

ಗುರು ವ್ಯಾಸರ ಹಿತವ ಪಡೆದ್ಯೋ ಮಧ್ವರಾಯ, ಅಯ್ಯ
ಪುರಂದರ ವಿಠಲನ ದಾಸನಾದ್ಯೋ ಮಧ್ವರಾಯ ‖ 3 ‖

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಇದರಲ್ಲಿ ಹನುಮ–ಭೀಮ–ಮಧ್ವರೆಂಬ ಅವತಾರತ್ರಯದ ವರ್ಣನೆಯಿದೆ. ರಾಮಾವತಾರದಲ್ಲಿ ಹನುಮಂತನಾಗಿ ರಾಮನ ಪ್ರೀತಿಯನ್ನೂ, ಕೃಷ್ಣಾವತಾರದಲ್ಲಿ ಭೀಮನಾಗಿ ಕೃಷ್ಣನ ಪ್ರೀತಿಯನ್ನೂ, ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ನಾರಾಯಣನ ಅವತಾರವೇ ಆದ ವೇದವ್ಯಾಸರ ಪ್ರೀತಿಯನ್ನೂ ಪಡೆದುಕೊಂಡರೆಂದು ತಾತ್ಪರ್ಯ.

ವಾಮಮುಷ್ಟಿಲಿ... – ರಾಮರಾವಣರಿಗೆ ನಡೆದ ಯುದ್ಧ ಸಂದರ್ಭದಲ್ಲಿ ರಾವಣನನ್ನು ತನ್ನ ಎಡಗೈ ಮುಷ್ಟಿಯಿಂದ ಹೊಡೆದು ಅವನು ತತ್ತರಿಸುವಂತೆ ಮಾಡಿದನು.

ಕಾಮಿತಾರ್ಥ... – ದೇವತೆಗಳಿಗೆ ಪ್ರಿಯವಾಗಿದ್ದ ರಾವಣವಧೆಯನ್ನು ರಾಮನಿಂದ ಮಾಡಿಸಿದವನು ಹನುಮಂತ; ಸೀತೆಯ ಸುಳುಹನ್ನು ಪಡೆದುಕೊಂಡು ರಾವಣನ ಸುದ್ದಿಯನ್ನು ರಾಮನಿಗೆ ತಂದವನು.

ಗುರುವ್ಯಾಸರ ಹಿತವ... – ಶ್ರೀ ವ್ಯಾಸರಿಗೆ ಪ್ರಿಯವಾದ ದ್ವೈತ ಶಾಸ್ತ್ರವನ್ನು ಸ್ಥಾಪಿಸಿ ಅವರ ಉದ್ದೇಶ ನೆರವೇರಿಸಿದೆ. ಉತ್ತರ ದೇಶದ ಯಾತ್ರೆ ಮಾಡಿ ಮಧ್ವಾಚಾರ್ಯರು ಹಿರಿಯ ಬದರಿಯಲ್ಲಿ ವೇದವ್ಯಾಸರನ್ನು ಕಂಡು ಅವರನ್ನು ಪ್ರೀತಿ ಪಡಿಸಿದರೆಂಬ ವಿವರ ಮಧ್ವವಿಜಯದಲ್ಲಿದೆ.

ಮಾಯಮತವ... – ಜಗತ್ತೆಲ್ಲವೂ ಮಾಯೆ, ಮಿಥ್ಯೆ ಎಂಬ ವಾದವನ್ನು.

Classification: Keerthane
Ankita: purandara vittala
Location: NA
Category: Hanuma Stuti, Madhwacharya Stuti, Pooja Tatva.
Sub-Category: hanuma, hanuma-bhima-madhwa, bhima, madhva, rama, Krishna, kourava, bhumi, ravana, nara, vyasa, sura,
Pravachana: NA
Explanation: NA